# ಆಹಾ ಸುದ್ದಿ!

★ ಸಸಿತೋಟ



ಚೀನಾದ ವಿ- ಬಾರ್‌ನಲ್ಲಿ ಪೂರೈಸುವ ಬೆರಳಿನಾಕಾರದ ಕುಕೀಸ್. ಕಣ್ಣಿನಾಕಾರದ ಚಾಕೊಲೇಟ್, ಸಿರಿಂಜ್ ಹಾಗೂ ಬ್ಲಡ್ ಬ್ಯಾಗ್‌ನಲ್ಲಿ ಕಾಕ್‌ಟೇಲ್ ಮೊದಲಾದವುಗಳನ್ನು ಗ್ರಾಹಕರಿಗೆ ನೀಡುವ ಈ ಬಾರ್ ಅಮೆರಿಕದ ಟಿವಿ ಧಾರಾವಾಹಿ 'ದಿ ವ್ಯಾಂಪೈರ್ ಡಯರೀಸ್' ವೀಕ್ಷಿಸುವ ಯುವತಿಯರ ಮೆಚ್ಚಿನ ತಾಣವಂತೆ. ಧಾರಾವಾಹಿಗಳಲ್ಲಿ ಭೂತದಂತೆ ತೋರಿಸುವ ಅತ್ತೆಯರಿಗೆ ಹೆದರಿ ಈ ಬಾರ್‌ಗೆ ಬರುತ್ತಿದ್ದಾರಾ?



ಬಲ್ಗೇರಿಯಾದ ವರ್ನಾ ನಗರದಲ್ಲಿ ಈ ಹಸಿರು ಬೆಕ್ಕು ಸುಳಿದಾಡಿದಾಗ ಯಾರೋ ಇದಕ್ಕೆ ಹಸಿರು ಬಣ್ಣ ಬಳಿದಿದ್ದಾರೆ, ಅವರಿಗೆ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿ ಫೇಸ್‌ಬುಕ್‌ನಲ್ಲಿ ಆಂದೋಲನವೇ ನಡೆಯಿತು. ಕೊನೆಗೆ ಬೆಕ್ಕನ್ನೇ ಹಿಂಬಾಲಿಸಿದರೆ ಗ್ಯಾರೇಜೊಂದರಲ್ಲಿ ರಾಶಿ ಹಾಕಿದ ಹಸಿರು ಬಣ್ಣದ ಪುಡಿಯ ಮೇಲೆ ಮಲಗುತ್ತಿರುವುದು ಗೊತ್ತಾಯಿತಂತೆ. ಈಗ ಫೇಸ್‌ಬುಕ್ ಗ್ರೂಪ್ ಅನ್ನು ಹಸಿರು ಬೆಕ್ಕು ಎಂದು ಲೇವಡಿ ಮಾಡುತ್ತಿದ್ದಾರಂತೆ. ಆತುರಗಾರರಿಗೆ ಬೆಕ್ಕಿನ ಮೇಕಪ್ ತಂತ್ರ ಹೇಗೆ ಗೊತ್ತಾಗಬೇಕು!

ಫ್ಲಾರಿಡಾದಲ್ಲಿರುವ ಕಾಲೇಜೊಂದು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಲು ಅತ್ಯಾಕರ್ಷಕ ಯೋಜನೆ ರೂಪಿಸಿತ್ತು. ಬಾರ್‌ನಲ್ಲಿ ಬೆತ್ತಲೆ ನರ್ತಿಸುವ ನರ್ತಕಿಯರನ್ನು ಪ್ರವೇಶ ದಾಖಲಾತಿ ಪ್ರತಿನಿಧಿಗಳನ್ನಾಗಿ ನೇಮಿಸಿಕೊಂಡಿತ್ತಂತೆ. ಉದ್ರೇಕಕಾರಿ ಉಡುಪು ಧರಿಸಿ ರಸ್ತೆಗಳಲ್ಲಿ, ಪಾರ್ಕ್‌ಗಳಲ್ಲಿ, ರೈಲಿನಲ್ಲಿ ಓಡಾಡಿ ಯುವಕರನ್ನು ಬುಟ್ಟಿಗೆ ಬೀಳಿಸಿ ಕಾಲೇಜಿಗೆ ಅಡ್ಮಿಶನ್ ಮಾಡಿಸುವ ಕೆಲಸ ಈ ನರ್ತಕಿಯರದ್ದು. ಸದ್ಯ ಕಾಲೇಜು ಆಡಳಿತ ಮಂಡಳಿಯವರ ಜೊತೆ ಇವರೂ ಜೈಲು ಕಂಬಿ ಎಣಿಸುತ್ತಿದ್ದಾರೆ. ಅಲ್ಲಿಯೂ ಜೈಲಿನ ಪುರುಷ ಸಿಬ್ಬಂದಿಗೆ ಅಡ್ಮಿಶನ್ ನೀಡುವ ಕೆಲಸ ಆರಂಭಿಸದಿದ್ದರೆ ಸಾಕು.

ಲಂಡನ್ನಿನ ರೈಲುಗಳಲ್ಲಿ ಪಯಣಿಸುವವರು ತಮ್ಮ ತೂಕವನ್ನು ಕಡಿಮೆ ಮಾಡಿಕೊಳ್ಳಬೇಕಂತೆ. ಹೀಗಂತ ಅಲ್ಲಿಯ ಮಾಜಿ ಆರೋಗ್ಯ ಸಚಿವೆ ಆ್ಯನ್ ಸ್ಮಿತ್ ಸಲಹೆ ನೀಡಿದ್ದಾರಂತೆ. ಹಿಂಭಾಗ ದಪ್ಪ ಇರುವವರು ಮೂವರು ಕುಳಿತುಕೊಳ್ಳುವ ಸೀಟಿನ ಮೂರನೇ ಎರಡರಷ್ಟು ಭಾಗವನ್ನು ಅತಿಕ್ರಮಿಸಿಕೊಳ್ಳುತ್ತಾರಂತೆ. ಹೀಗಾಗಿ ಆ್ಯನ್ ಈ ಸಲಹೆಯನ್ನು ಟ್ವಿಟ್ಟರ್‌ನಲ್ಲಿ ನೀಡಿ ಸಾಕಷ್ಟು ಟೀಕೆ ಅನುಭವಿಸಿದ್ದಾರೆ. ಅದರ ಬದಲು ದಪ್ಪ ಇರುವವರು ಎರಡು ಟಿಕೆಟ್ ಖರೀದಿಸಿ ಎಂಬ ಸಲಹೆ ನೀಡಿದ್ದರೆ ಟೀಕೆಗಳು ಬರುತ್ತಿರಲಿಲ್ಲ!



'ಲಂಡನ್ ಬ್ರಿಜ್ ಫಾಲಿಂಗ್ ಡೌನ್' ಎಂಬ ಬ್ರಿಟಿಷ್ ನರ್ಸರಿ ಪದ್ಯ ಕೇಳಿರಬಹುದು. ಈಗ 'ಲಂಡನ್ ಹೌಸ್ ಮೆಲ್ಟಿಂಗ್ ಡೌನ್' ಎಂದು ಅದನ್ನು ಬದಲಾಯಿಸಿಕೊಳ್ಳಲು ಅಡ್ಡಿಯಿಲ್ಲ. ಅಲ್ಲಿಯ ಕಲಾವಿದ ಅಲೆಕ್ಸ್ ಚಿನ್ನೆಕ್ ಮೇಣದ 8000 ಇಟ್ಟಿಗೆಗಳನ್ನು ಬಳಸಿ ಈ ಮನೆ ನಿರ್ಮಿಸಿದ್ದಾನೆ. ಛಾವಣಿಯಲ್ಲಿ ಬಿಸಿ ಹೊರಸೂಸುವ ಯಂತ್ರಗಳನ್ನು ಅಳವಡಿಸಿದ್ದು, ಮನೆ ನಿಧಾನವಾಗಿ ಕರಗಿದೆ. ಚೆನ್ನೆಕ್ ಮನೆ ಕರಗಿಸಿದರೆ, ಮನೆ ಕಟ್ಟುವ ಗುತ್ತಿಗೆದಾರರು ಮಾಲೀಕನ ಹಣವನ್ನೇ ಕರಗಿಸಬಲ್ಲರು!



ಎರಡೇ ಚಕ್ರಗಳ ಮೇಲೆ ಓಡಿಸುವ 'ಸೈಡ್‌ವಾಲ್ ಸ್ಕೀಯಿಂಗ್' ಸೌದಿ ಅರೇಬಿಯಾದಲ್ಲಿ ಜನಪ್ರಿಯ. ಒಂದೇ ಚಕ್ರದ ಮೇಲೆ ಬೈಕ್ ಓಡಿಸುವ 'ವೀಲಿಂಗ್' ಸಾಹಸ ಬೆಂಗಳೂರಿನಲ್ಲೂ ಕದ್ದು ಮುಚ್ಚಿ ನಡೆಯುತ್ತಿದೆ. ಚಕ್ರವಿಟ್ಟರೆ ಈ ರೀತಿಯ ಸಾಹಸ, ಚಕ್ರವೇ ಇರದಿದ್ದರೆ...!